


# ಹೇಗಿದ್ದ 'ಜಡ್ಡು' ಹೇಗಾದ ಗೊತ್ತಾ...

■ ಪ್ರಮೋದ

ಅದು 2013ರ ಜನವರಿ ತಿಂಗಳು. ರಣಜಿ ಪಂದ್ಯದ ವರದಿಗಾಗಿ ಗುಜರಾತ್‌ನ ರಾಜಕೋಟ್‌ಗೆ ಹೋಗಿದ್ದಾಗ ಅಲ್ಲಿನ ಕ್ರಾಸ್ ರೋಡ್ ಬಿಲ್ಡಿಂಗ್ ಸಮೀಪ ಕ್ರಿಕೆಟ್ ಲೋಕವೇ ಎದ್ದು ಕಾಣುವಂತೆ ವಸ್ತು ಸಂಗ್ರಹಾಲಯ ಕಣ್ಣಿಗೆ ಕುಕ್ಕುತ್ತಿತ್ತು. ಅದೇ ರಸ್ತೆಯಲ್ಲಿ ಮುಂಬೈ, ಹಾಗೂ ದೆಹಲಿ ಕ್ರೀಡಾ ಪತ್ರಕರ್ತರ ಜೊತೆ ಹರಟುತ್ತಾ ಹೊರಟಿದ್ದಾಗ ಕುತೂಹಲಕ್ಕೆ 'ಅದೇನದು' ಎಂದು ಪ್ರಶ್ನಿಸಿದೆ. ತಕ್ಷಣ ಪತ್ರಕರ್ತ ಮಿತ್ರರೊಬ್ಬರು 'ಜಡ್ಡು ಫುಡ್ ಫೀಲ್ಡ್ ರೆಸ್ಟೋರೆಂಟ್, ರಾಜಕೋಟ್‌ನಲ್ಲಿ ಬಹಳ ಫೇಮಸ್' ಎಂದರು.

ಕುತೂಹಲ ತಡೆಯಲಾಗದೆ ಅಂದಿನ ಊಟ ಅದೇ ರೆಸ್ಟೋರೆಂಟ್‌ನಲ್ಲಿ ಮಾಡಲು ಹೊರಟೆವು. ಜಡ್ಡು ಫುಡ್ ಒಳಗೆ ಕಾಲಿಡುತ್ತಿದ್ದಂತೆ ಕ್ರಿಕೆಟ್ ಫೀಲ್ಡ್‌ಗೆ ಕಾಲಿಟ್ಟ ಅನುಭವ. ಎಲ್ಲಿ ನೋಡಿದರಲ್ಲೂ ಕ್ರಿಕೆಟ್‌ಗೆ ಸಂಬಂಧಿಸಿದ ಸಾಮಗ್ರಿಗಳು. ಬ್ಯಾಟ್, ಬಾಲ್, ವಿಕೆಟ್ಸ್, ಪ್ಯಾಡ್, ಚೆನ್ನೈ ಸೂಪರ್ ಕಿಂಗ್ಸ್ ಚಿಹ್ನೆ ಹೊಂದಿದ್ದ ಹೆಲ್ಮೆಟ್ (ರವೀಂದ್ರ ಜಡೇಜ ಆಗ ಐಪಿಎಲ್‌ನಲ್ಲಿ ಪ್ರತಿನಿಧಿಸುತ್ತಿದ್ದ ತಂಡ), ಕ್ರಿಕೆಟ್ ಬದುಕಿನ ಸ್ಮರಣೀಯ ಕ್ಷಣಗಳ ಛಾಯಾಚಿತ್ರಗಳು ಹೀಗೆ ರೆಸ್ಟೋರೆಂಟ್‌ನಲ್ಲಿ ಕ್ರಿಕೆಟ್ ಸಾಮಗ್ರಿಗಳೇ ಹೆಚ್ಚಿದ್ದವು. ಕ್ರೀಡಾಸಕ್ತಿ ಇರುವವರು ಒಮ್ಮೆ ರೆಸ್ಟೋರೆಂಟ್‌ಗೆ ಹೋಗಿ ಬಂದರೆ ಮತ್ತೆ ಮತ್ತೆ ಹೋಗಬೇಕು ಎನ್ನುವಷ್ಟರ ಮಟ್ಟಿಗೆ ಆಕರ್ಷಿಸುವ ವಸ್ತುಗಳು ಅಲ್ಲಿವೆ.

ಅಲ್ಲಿರುವ ಸಿಬ್ಬಂದಿ, ಮ್ಯಾನೇಜರ್ ಎಲ್ಲರೂ ಕ್ರಿಕೆಟ್ ಪ್ರಿಯರು. ನಾವು ಕೇಳಿದ ತಿನಿಸು ಕೊಡುತ್ತಲೇ; 'ಸರ್ ಅಲ್ಲಿದೆ ನೋಡಿ ಅದು ಜಡ್ಡು ಸರ್ ಮೊದಲ ಅಂತರರಾಷ್ಟ್ರೀಯ ಏಕದಿನ ಪಂದ್ಯ ಆಡಿದಾಗ ಧರಿಸಿದ್ದ ಜೆರ್ಸಿ, ಇಲ್ಲಿದೆ ನೋಡಿ; ಇದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಮೊದಲ ತ್ರಿಶತಕ ಗಳಿಸಿದ್ದಾಗ ಬಳಸಿದ ಬ್ಯಾಟ್...' ಹೀಗೆ ಒಂದೊಂದಾಗಿ ತೋರಿಸುತ್ತಾ ಹೋಗುತ್ತಾರೆ. ಜಗತ್ತಿನ ಶ್ರೇಷ್ಠ ಆಲ್‌ರೌಂಡರ್ ಆಗಿ ಬೆಳೆದಿರುವ ಅವರ ಕ್ರಿಕೆಟ್ ಬದುಕನ್ನು ರೆಸ್ಟೋರೆಂಟ್ ಸಿಬ್ಬಂದಿ ಪರಿಚಯಿಸುತ್ತಾರೆ.

ಹೀಗೆ ಮೈದಾನ, ಮನೆ–ಮನ, ರೆಸ್ಟೋರೆಂಟ್, ಕೈಗಳ ಮೇಲೆ ಟ್ಯಾಟೂ ಹಾಕಿಸಿಕೊಂಡು ಸದಾ ಕ್ರಿಕೆಟ್‌ಗಾಗಿ ತುಡಿಯುವ ರವೀಂದ್ರ ಜಡೇಜ ಭಾರತ ಕಂಡ ಸಾಮಾನ್ಯ ಕುಟುಂಬದ ಅಸಾಮಾನ್ಯ ಪ್ರತಿಭಾವಂತ ಕ್ರಿಕೆಟಿಗ. ಪ್ರತಿಷ್ಠಿತ ವಿಸ್ಡನ್ ನಿಯತಕಾಲಿಕೆಯ 21ನೇ ಶತಮಾನದ ಶ್ರೇಷ್ಠ